**ಓ.ಎಸ್. ನಂಃ 234/2017**

**ಪಿ.ಡಬ್ಲ್ಯೂಃ 1**

**ದಿನಾಂಕ 20.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ: ಶ್ರೀ.ಕೆ.ಬಿ.ಜಿ.ವಕೀಲರಿಂದಃ</u>**

14. 1 ನೇ ಪ್ರತಿವಾದಿಗೆ ಸುಜಾತ ಎನ್ನುವ ಮಗಳು ಹಾಗೂ ಮಹದೇವಪ್ಪ ಎನ್ನುವ ಮಗನಿರುತ್ತಾನೆ. 1 ನೇ ಪ್ರತಿವಾದಿಯ ಗಂಡನ ಹೆಸರು ರುದ್ರಪ್ಪ ಅಂತ ಇರುತ್ತದೆ. 1 ನೇ ಪ್ರತಿವಾದಿ, ಅವರ ಗಂಡನಾದ ರುದ್ರಪ್ಪ ಮತ್ತು 1 ನೇ ಪ್ರತಿವಾದಿಯ ಮಕ್ಕಳು ಇವರೆಲ್ಲರು ಸೇರಿ ದಿನಾಂಕ 23.03.2013 ರಂದು ಕೌಳೂರು ಗ್ರಾಮದ ಸರ್ವೇ ನಂಬರ್ 13/7 ಎ ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ಸ್ವಾಮಿಗೌಡ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಕೌಳೂರು ಗ್ರಾಮದ ಸರ್ವೇ ನಂಬರ್ 13/7 ಎ ರ 1 ಎಕರೆ 10 ಗುಂಟೆ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

15. 1 ನೇ ಪ್ರತಿವಾದಿಯ ಮಗಳಾದ ಸುಜಾತರವರ ಗಂಡನ ಹೆಸರು ನಾಗೇಂದ್ರ ಅಂತ ಇರುತ್ತದೆ. ದಿನಾಂಕ 23.03.2013 ರಂದು ಸ್ವಾಮಿಗೌಡರಿಗೆ ಮಾರಾಟ ಮಾಡಿದ್ದ ಕೌಳೂರು ಗ್ರಾಮದ ಸರ್ವೇ ನಂಬರ್ 13/7 ಎ ರ 1 ಎಕರೆ 10 ಗುಂಟೆ ಜಮೀನನ್ನು ಸದರಿ ಸುಜಾತರವರ ಗಂಡನಾದ ನಾಗೇಂದ್ರರವರ ಮರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಕೌಳೂರು ಗ್ರಾಮದ ಸರ್ವೇ ನಂಬರ್ 13/7 ಎ ರ 1 ಎಕರೆ 10 ಗುಂಟೆ ಜಮೀನು ನಿಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

16. ಕೌಳೂರು ಗ್ರಾಮದ ಸರ್ವೇ ನಂಬರ್ 13/7 ಬಿ ರ 29 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ಕುಟುಂಬಕ್ಕೆ ಸೇರಿದ ಮೇಲೆ ಹೇಳಿದ 1 ಎಕರೆ 39 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

17. ಎಷ್ಟು ವರ್ಷಗಳಿಂದ ನಿಮ್ಮ ಮತ್ತು 2 ನೇ ಪ್ರತಿವಾದಿಯ ಮಧ್ಯೆ ವೈಮನಸ್ಸು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ 2 ನೇ ಪ್ರತಿವಾದಿಯ ಪರಿಚಯವಿಲ್ಲ

ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಪಹಣಿಯಲ್ಲಿರುವ ತಮ್ಮಯ್ಯ ಬಿನ್ ಕಾಳನಕುಂಟೆಗೌಡರವರು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

18. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿದ್ದು, ಅದರಲ್ಲಿರುವ ಹಸಿರು ಬಣ್ಣದ ಮನೆ ನನ್ನ ತಾಯಿಗೆ ಸೇರಿದ ಮನೆಯಾಗಿರುತ್ತದೆ ಎಂದು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರ ಮನೆಯನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಅದರಲ್ಲೂ ಸಹ ಭಾಗ ಬೇಕು ಎಂದು ನುಡಿದಿರುತ್ತಾರೆ.

19. ನಮ್ಮ ಮತ್ತು 2 ನೇ ಪ್ರತಿವಾದಿಯ ಮಧ್ಯೆ ವೈಮನಸ್ಸು ಇರುವ ಕಾರಣ ನಮ್ಮ ಕುಟುಂಬಕ್ಕೆ ಸೇರಿದ ಇತರೆ ಆಸ್ತಿಗಳನ್ನು ಹೊರತುಪಡಿಸಿ ಕೇವಲ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ದಾವಾ ಆಸ್ತಿಯನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿ ಈ ಸುಳ್ಳು ದಾವೆಯನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಕುಟುಂಬಕ್ಕೆ ಸೇರಿದ ಮೇಲೆ ಹೇಳಿದ 1 ಎಕರೆ 39 ಗುಂಟೆ ಜಮೀನನ್ನು, ನಿಡಿ.1 ರ ಮನೆಯನ್ನು ಮತ್ತು ನಮ್ಮ ಕುಟುಂಬಕ್ಕೆ ಸೇರಿದ ಉಳಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದ ಕಾರಣ ಹಾಗೂ, ದಾವಾ ಆಸ್ತಿಯ ಪಹಣಿಯಲ್ಲಿರುವ ತಮ್ಮಯ್ಯರವರನ್ನು ಮತ್ತು ಕೌಳೂರು ಗ್ರಾಮದ ಸರ್ವೇ ನಂಬರ್ 13/7 ಎ ರ 1 ಎಕರೆ 10 ಗುಂಟೆ ಜಮೀನಿನ ಖರೀದಿದಾರನಾದ ನಾಗೇಂದ್ರರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದಿರುವ ಕಾರಣ ಈ ದಾವೆಯು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡಿದಾನಿಂದಲೂ ಖರೀದಿದಾರಾನಾದ ತಮ್ಮಯ್ಯರವರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೇ ನಂಬರ್ ಮತ್ತು ಚೆಕ್ಕುಬಂಧಿಗಳು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**